# ಮಕ್ಕಳ ಮೇಲೆ ಪಾಲಕರ ಒತ್ತಡ ಕಡಿಮೆಯಾಗಲಿ



ಯಲ್ಲಾಪುರ: ಸಮಾರಂಭದಲ್ಲಿ ಸ್ವರ್ಣವಲ್ಲೀ ಶ್ರೀಗಳು ಆಶೀರ್ವಚನ ನೀಡಿದರು.

**ಯಲ್ಲಾಪುರ:** ಮಕ್ಕಳ ಮೇಲೆ ಪಾಲಕರ ಒತ್ತಡ ಕಡಿಮೆಯಾಗಬೇಕು. ಈ ಒತ್ತಡ ಮಕ್ಕಳ ಮನಸ್ಸಿನ ಮೇಲೆ ಅಡ್ಡ ಪರಿಣಾಮ ಬೀರಿ ವಿಚಿತ್ರವಾದ ನಿರೀಕ್ಷಿಸದ ಸಂಗತಿಗಳಿಗೆ ಕಾರಣವಾಗುತ್ತದೆ ಎಂದು ಸೋಂದಾ ಸ್ವರ್ಣವಲ್ಲಿಯ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ನುಡಿದರು.

ತಾಲೂಕಿನ ನಂದೊಳ್ಳಿಯ ಸರಕಾರಿ ಹಿರಿಯ ಪ್ರಾಥಮಿಕಶಾಲೆಶತಮಾನೋತ್ಸವಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಮಕ್ಕಳ ಸಹಜ ಆಸಕ್ತಿ ಮತ್ತು ಸಾಮರ್ಥ್ಯಗಳನ್ನು ಪಾಲಕರು, ಶಿಕ್ಷಕರು ಗಮನಿಸಬೇಕು. ಮಕ್ಕಳ ಬಗ್ಗೆ ಶಿಕ್ಷಕರ ಮತ್ತು ಪಾಲಕರ ಹೊಣೆಗಾರಿಕೆ ಮುಖ್ಯವಾಗಿದೆ. ಮಕ್ಕಳಲ್ಲಿ ಉದ್ವೇಗಗಳಿಗೆ ಅವಕಾಶ ಕೊಡದೇ ಯೋಗ ಪ್ರಾಣಾಯಾಮದಂತಹ ಸಂಗತಿಗಳನ್ನು ನೀಡಿ ಬದುಕಿನ ಮಾರ್ಗವನ್ನು ರೂಪಿಸಬೇಕು ಎಂದರು.

ಶತಮಾನೋತ್ಸವ ಸಮಾರಂಭ ಉದ್ಘಾಟಿಸಿದ ವಿಕೇಂದ್ರಿಕರಣ ಮತ್ತು ಅಭಿವೃದ್ಧಿ ಯೋಜನೆ ಸಮಿತಿ ಉಪಾಧ್ಯಕ್ಷ ಪ್ರಮೋದ ಹೆಗಡೆ ಮಾತನಾಡಿ, ಪ್ರಾಥಮಿಕ ಶಾಲೆ ಪ್ರತಿಯೊಬ್ಬನ ಬದುಕನ್ನು ರೂಪಿಸುವ ತಳಪಾಯ. ಈ ಹಂತದಲ್ಲಿ ದೊರೆತ ಶಿಕ್ಷಣದಿಂದ ವ್ಯಕ್ತಿಯೊಬ್ಬ ಸರಿಯಾದ ಮಾರ್ಗದಲ್ಲಿ ಸಾಗುತ್ತಾನೆ. ಈ ಹಂತದಲ್ಲಿ ಅನುಭವಿಸಿರುವ ಕಷ್ಟಗಳು ಮುಂದೆ ಸುಖವನ್ನು ಪಡೆದುಕೊಳ್ಳಲು ಮತ್ತು ಸಮಾಜದ ಉನ್ನತ ವ್ಯಕ್ತಿಯಾಗಿ ಬಾಳಲು ಸಾಧ್ಯವಾಗಲಿದೆ ಎಂದರು.

ವಿಸ್ತಾರ ಮೀಡಿಯಾ,ಪ್ರೈ.ಲಿ ಪ್ರಧಾನ ಸಂಪಾದಕ ಹರಿಪ್ರಕಾಶ ಕೋಣೆಮನೆ ಆಶಯನುಡಿಗಳನ್ನಾಡಿ, ಹಿಂದಿನ ಪರಂಪರೆಯನ್ನು ಮರೆಯದೇ ಮುಂದಿನ ಹಂತಕ್ಕೆ ಸಾಗಬೇಕು. ಅನುಕರಣೆಯ ಶಿಕ್ಷಣ ಬೇಡ. ನಗರೀಕರಣದೊಂದಿಗೆ ನಾವು ಕೆಡುತ್ತಿದ್ದೇವೆ. ನಗರ ಕೇಂದ್ರಿತ ಶಿಕ್ಷಣದಲ್ಲಿ ಆತ್ಮವಿಶ್ವಾಸವೇ ಬೆಳೆಯುತ್ತಿಲ್ಲ. ಬದುಕಿನ ಕಲ್ಪನೆಯೂ ಬರುತ್ತಿಲ್ಲ. ಆದರೆ ಗ್ರಾಮೀಣ ಭಾಗದಲ್ಲಿ ಉಳಿದುಕೊಂಡಿರುವ ಸದ್ವಿಚಾರ ಮತ್ತು ಉದಾತ್ತ ಸಂಗತಿಗಳನ್ನು ಮಕ್ಕಳಲ್ಲಿ ಬೆಳೆಸುವ ಕೆಲಸವಾಗಬೇಕು ಎಂದರು.

ಬಿ.ಇ.ಒ ಎನ್.ಆರ್. ಹೆಗಡೆ, ಟಿ.ಎಂ.ಎಸ್. ಅಧ್ಯಕ್ಷ ನಾರಾಯಣ ಭಟ್ಟ ಅಗ್ಗಾಶಿಕುಂಬ್ರಿ ಮಾತನಾಡಿದರು. ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷ ನಾರಾಯಣ ನಾಯಕ, ಎಸ್.ಡಿ.ಎಂ.ಸಿ. ಅಧ್ಯಕ್ಷ ವಿನಾಯಕ ಭಟ್ಟ, ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ಆರ್.ಎಸ್.ಭಟ್ಟ, ಹಿರಿಯರಾದ ನಾಗೇಶ ಪಣತಗೇರಿ, ಮುಖ್ಯ ಶಿಕ್ಷಕ ಭಾಸ್ಕರ ನಾಯ್ಕ, ಮತ್ತಿತರರು ಉಪಸ್ಥಿತರಿದ್ದರು. ಸಮಾರಂಭದಲ್ಲಿ ಈ ಶಾಲಾ ಪ್ರಾರಂಭಕ್ಕೆ ಕಾರಣೀಕರ್ತರಾದ ದಿ। ಕೃಷ್ಣ ರಾಮ ಭಾಗವತರ ಪರವಾಗಿ ತಿಮ್ಮಣ್ಣ ಕೃಷ್ಣ ಭಾಗ್ವತ ಅವರನ್ನು ಗೌರವಿಸಲಾಯಿತು. ಶಿಕ್ಷಕ ಆರ್.ಆರ್. ಭಟ್ಟ ಸ್ವಾಗತಿಸಿದರು. ನರಸಿಂಹ ಕೋಣೆಮನೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಂ.ಎಸ್. ಭಟ್ಟ ಹಾಗೂ ಕುಮಾರಿ ಮೇಘನಾ ನಾಯ್ಕ್ ನಿರ್ವಹಿಸಿದರು.